ಅ) ಆದರೆ, 1996-97 ಹಾಗೂ 97-98ನೇ ಸಾಲಿನಲ್ಲಿ ಕುಣಿಗಲ್ ವಿಧಾನ ಸಭಾ ಕ್ಷೇತ್ರಕ್ಕೆ ಕ್ರಮವಾಗಿ 4.80 ಲಕ್ಷ ಹಾಗೂ 3.00 ಲಕ್ಷ ರೂಗಳನ್ನು ಈ ಕೆಳಕಂಡ ಕಾಮಗಾರಿಗಳ ಅನುಷ್ಠಾನಕ್ಕಾಗಿ ಅನುಷ್ಠಾನಗಳಿಗೆ ಬಿಡುಗಡೆ ಮಾಡಲಾಗಿದೆ.

ವರ್ಷ	ಕ್ರ. ಸಂ.	ಕಾಮಗಾರಿಗಳ ವಿವರ	ಬಿಡುಗಡೆ ಮಾಡಲಾದ ಅನುದಾನ (ಲಕ್ಷ ರೂ.ಗಳಲ್ಲಿ)
1996-97	1.	ತುಮಕೂರು ತಾಲ್ಲೂಕು ಗೋಳೂರಿನಿಂದ ಕಿತ್ತನಹಳ್ಳಿ ರಸ್ತೆ ದುರಸ್ತೆ	1.00
	2.	ಕುಣಿಗಲ್ ತಾ: ಕೋತಗೇರಿ ಹೋಬ್ಲಿ ಕೆಂಪು ಸಾಗರದಿಂದ ಶೃಂಗೇರಿ ರಸ್ತೆ ನಿರ್ಮಾಣ.	0.50
	3.	ಕುಣಿಗಲ್ ತಾ: ಸಿಂಗೋನಹಳ್ಳಿಯಿಂದ ಕಟ್ಟಪಾಳ್ಯ ಚನ್ನವಪಾಳ್ಯ, ಕುರಿಬೋರಯ್ಯನ ಪಾಳ್ಯ ಭಕ್ತರ ಹಳ್ಳಿ ರಸ್ತೆಯವರೆಗೆ 3. ಕಿ.ಮೀ ರಸ್ತೆ ಅಭಿವೃದ್ಧಿ	2.00
	4.	ಕುಣಿಗಲ್ ತಾ: ಶೆಟ್ಟಿಗೇರಿಯಿಂದ ಕುರಡಿ ಹಳ್ಳಿ ಗಡಿಯವರೆಗೆ ರಸ್ತೆ ಅಭಿವೃದ್ಧಿ	0.50
	5.	ಕಾಟಪ್ಪನಪಾಳ್ಯ ಜಲಾನಯನ ಅಭಿವೃದ್ಧಿ (ವಿಶೇಷ ಘಟಕ ಯೋಜನೆ)	0.80
		ಒಟ್ಟು	4.80
1997-98	1.	ಬಿದರ ಕಟ್ಟೆಯಿಂದ ತಿಮ್ಮಸಂದ್ರ ಮಾರ್ಗವಾಗಿ ನಾಗವಲ್ಲಿಯವರೆಗೆ ರಸ್ತೆಗೆ ಜೆಲ್ಲಿ ಹಾಕುವುದು	1.00
	2.	ಮುಳಕುಂಟೆಯಿಂದ ಕುಲ್ಲುಪಾಳ್ಯದ ರಸ್ತೆಗೆ ಎರಡನೇ ಪದರ ಜೆಲ್ಲಿ ಹಾಕುವುದು	2.00
		ಒಟ್ಟು	3.00

ರಾಜ್ಯದಲ್ಲಿ ಕೆರೆಗಳ ಹೂಳು ತೆಗೆಯುವುದು

320 (314) ಶ್ರೀ ಎಸ್. ಡಿ. ಮುದ್ದಹನುಮೇಗೌಡ (ಕುಣಿಗಲ್) : ಮಾನ್ಯ ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ

ಅ) ರಾಜ್ಯದಲ್ಲಿರುವ ಕೆರೆಗಳಲ್ಲಿ ಹೂಳು ತುಂಬಿ ರೈತರಿಗೆ ತೊಂದರೆಯಾಗುತ್ತಿರುವುದಲ್ಲದೆ ಅಂತರ್ಜಲ ಸಮಸ್ಯೆಯೂ ಹೆಚ್ಚುತ್ತಿರುವ ಬಗ್ಗೆ ಸರ್ಕಾರದವರ ಗಮನಕ್ಕೆ ಬಂದಿದೆಯೇ;

ಆ) ಹಾಗಿದ್ದಲ್ಲಿ ಈ ಬಗ್ಗೆ ಸರ್ಕಾರದವರು ಕೈಗೊಳ್ಳಲಿರುವ ಕ್ರಮಗಳೇನು?

ಶ್ರೀ ತಿಪ್ಪೇಸ್ವಾಮಿ (ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಸಚಿವರು) :

ಅ) ಬಂದಿದೆ

ಆ) ಕೆರೆಗಳಲ್ಲಿ ತುಂಬಿರುವ ಹೂಳನ್ನು ರೈತರ ಸಹಯೋಗದಿಂದ ತೆಗೆಯಲು 5 ವರ್ಷಗಳ ಅವಧಿಯ ಕ್ರಿಯ ಯೋಜನೆ ತಯಾರಿಸಲಾಗಿದ್ದು, ಅನುದಾನದ ಲಭ್ಯತೆ ಮೇಲೆ ಹಂತಹಂತವಾಗಿ ಹೂಳನ್ನು ತೆಗೆಯಲು ಉದ್ದೇಶಿಸಿದೆ.

ಅನೇಕಲ್ ತಾಲ್ಲೂಕಿನಲ್ಲಿ ಏತ ನೀರಾವರಿ ಯೋಜನೆ

321 (621) ಶ್ರೀ ನಾರಾಯಣಸ್ವಾಮಿ (ಆನೇಕಲ್) : ಮಾನ್ಯ ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ

ಅ) ಆನೇಕಲ್ ತಾಲ್ಲೂಕು ಸರ್ಜಾಪುರ ಹೋಬಳಿಗೆ ಬೆಳ್ಳಂದೂರು ಕೆರೆಯಿಂದ ಏತ ನೀರಾವರಿ ಯೋಜನೆಯ ಅನುಷ್ಠಾನ ಯಾವ ಹಂತದಲ್ಲಿ ಇದೆ, ಇದರ ಕಾರ್ಯ ಯೋಜನೆ ಯಾವಾಗ ಪ್ರಾರಂಭಿಸಲಾಗುವುದು?

ಶ್ರೀ ತಿಪ್ಪೇಸ್ವಾಮಿ (ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಸಚಿವರು) :

ಅ) ಪ್ರಸ್ತಾವನೆ ಪರಿಶೀಲನಾ ಹಂತದಲ್ಲಿದೆ. ತಾಂತ್ರಿಕವಾಗಿ ಮತ್ತು ಆರ್ಥಿಕವಾಗಿ ಶಕ್ಯವಾದಲ್ಲಿ ಮುಂದಿನ ಕ್ರಮ ಕೈಗೊಳ್ಳಲಾಗುವುದು.

ಪಡಿತರ ವಿತರಣೆಯಲ್ಲಿ ವ್ಯತ್ಯಾಸ

322 (622) ಶ್ರೀ ನಾರಾಯಣ ಸ್ವಾಮಿ (ಆನೇಕಲ್) : ಮಾನ್ಯ ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವಿರೆ

ಅ) ಬೆಂಗಳೂರು ಜಿಲ್ಲೆಯಲ್ಲಿ ಆಹಾರ ಪಡಿತರ ವಿತರಣೆಯಲ್ಲಿ ಬೆಂಗಳೂರು ನಗರಕ್ಕೂ ಮತ್ತು ಜಿಲ್ಲೆಯ ಪುರಸಭೆಗಳಿಗೂ ವ್ಯತ್ಯಾಸವಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ;

ಆ) ಹಾಗಿದ್ದಲ್ಲಿ ಇದಕ್ಕೆ ಕಾರಣಗಳೇನು ಹಾಗೂ ಇದನ್ನು ಸರಿಪಡಿಸಲು ಸರ್ಕಾರದವರು ಕೈಗೊಳ್ಳಲಿರುವ ಕ್ರಮಗಳೇನು?

ಶ್ರೀ ಬಸವಣ್ಣಪ್ಪ (ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು) :

ಅ) ಅಕ್ಕಿ ಮತ್ತು ಗೋದಿಯ ವಿತರಣಾ ಪ್ರಮಾಣದಲ್ಲಿ ಯಾವುದೇ ತಾರತಮ್ಯವಿರುವುದಿಲ್ಲ. ಸಕ್ಕರೆ ಮತ್ತು ಸೀಮೆ ಎಣ್ಣೆಯ ವಿತರಣಾ ಪ್ರಮಾಣದಲ್ಲಿ ತಾರತಮ್ಯ ಇರುತ್ತದೆ.

ಆ) ಈ ತಾರತಮ್ಯವನ್ನು ಹೋಗಲಾಡಿಸಲು ರಾಜ್ಯಕ್ಕೆ ಹಾಲಿ ಬಿಡುಗಡೆ ಮಾಡುತ್ತಿರುವ ಸೀಮೆ ಎಣ್ಣೆಯ ಹಂಚಿಕೆ ಪ್ರಮಾಣವನ್ನು ಕೇಳಿರುವ ಪ್ರಮಾಣದಲ್ಲಿ ಬಿಡುಗಡೆ ಮಾಡಿದಲ್ಲಿ ರಾಜ್ಯದ ಎಲ್ಲಾ ಭಾಗದ ಪಡಿತರ ಚೀಟಿದಾರರಿಗೆ ಒಂದೇ ಸಮನಾಗಿ ವಿತರಣೆ ಮಾಡಲು ಕ್ರಮ ಕೈಗೊಳ್ಳಬಹುದು.